4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿ

ಎಸ್.ಸಿ. ನಂಃ 5033/2019

**(ದಿನಾಂಕಃ 30-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಹೆಸರುಃ ಆನಂದ ಪಿ.ಡಬ್ಲ್ಯೂ- 12.

ತಂದೆಯ ಹೆಸರುಃ ಚೆಲುವಯ್ಯ ಸಿ.ಡಬ್ಲ್ಯೂ- 18.

ವಯಸ್ಸುಃ 42 ವರ್ಷ

ಉದ್ಯೋಗಃ ವ್ಯಾಪಾರ.

ವಾಸಃ ಕಾಮಾಕ್ಷಿ ಪಾಳ್ಯ, ಬೆಂಗಳೂರು.

**ಮುಖ್ಯ ವಿಚಾರಣೆಃ** ಸರ್ಕಾರಿ ಅಭಿಯೋಜಕರಿಂದಃ

ನಮ್ಮ ಮನೆ ಬೆಂಗಳೂರಿನ ಕಾಮಾಕ್ಷಿಪಾಳ್ಯದ ವೃಷಭಾವತಿ ನಗರದಲ್ಲಿದೆ.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ನಾನು ಈ ಮೊದಲು ನೋಡಿಲ್ಲ. ಚಾಸಾ-16 ಕಿರಣ್ ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರನ್ನಾದರೂ ನಾನು ಹುಡುಕುವ ಪ್ರಯತ್ನ ಮಾಡಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಪಿಪಿ ಯವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ, ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ಕಾಮಾಕ್ಷಿಪಾಳ್ಯದ ವಾಸಿ ಕಿರಣ್ ನನ್ನ ಸ್ನೇಹಿತ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ 6 ನೇ ಆರೋಪಿ ಬಸವರಾಜು ರವರು ಆತನ ಸಂಬಂಧಿ ಎಂದರೆ ಸರಿಯಲ್ಲ. ಅವರಿಗೆ ಪಲ್ಲವಿ ಹಾಗೂ ದಿಕ್ಷಿತ್‌ಗೌಡ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸುಮಾರು 15 ವರ್ಷಗಳಿಂದ ಒಬ್ಬ ಮನು ಎಂಬ ವ್ಯಕ್ತಿ ಅವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 22-10-2018 ರಂದು ಕಾಲೇಜಿಗೆ ಹೋಗಿದ್ದ ಬಸವರಾಜುರವರ ಮಗಳು ಪಲ್ಲವಿ ಮನೆಗೆ ಬಾರದೇ ಇದ್ದುದರಿಂದ ನಾನು, ಕಿರಣ್, ಅರುಣ್, ಚೇತನ್ ಎಲ್ಲರೂ ಕೂಡಿಕೊಂಡು ನಮಗೆ ಗೊತ್ತಿರುವ ಸ್ನೇಹಿತರು ಹಾಗೂ ನೆಂಟರಿಷ್ಟರ ಮನೆಯೆಲ್ಲಾ ಹುಡುಕಾಡಿದೆವು ಎಂದರೆ ಸರಿಯಲ್ಲ. ನಂತರ ಆಕೆ ಪತ್ತೆಯಾಗದಿದ್ದರಿಂದ ದಿನಾಂಕಃ 25-10-2018 ರಂದು ಬಸವರಾಜುರವರು ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಈ ನಡುವೆ ದಿನಾಂಕಃ 22-10-2018 ರಿಂದ ಬಸವರಾಜುರವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಮನು ಸಹ ಕಾಣದೇ ಇದ್ದುದರಿಂದ, ಆತನ ಮೇಲೆ ಅನುಮಾನ ಬಂದು ನಾವೆಲ್ಲಾ ಹುಡುಕಾಡಿದೆವು ಎಂದರೆ ಸರಿಯಲ್ಲ.

ಹೀಗಿರುವಾಗ ದಿನಾಂಕಃ 06-01-2019 ರಂದು ರಾತ್ರಿ 9-00 ಗಂಟೆ ಸುಮಾರಿಗೆ ಮನು ಮತ್ತು ಪಲ್ಲವಿ ಚನ್ನರಾಯಪಟ್ಟಣದ ಲಾಡ್ಜ್ ನಲ್ಲಿ ಇರುವ ಬಗ್ಗೆ ಮಾಹಿತಿ ಸಿಕ್ಕಿದ್ದರಿಂದ ನಾವೇಲ್ಲರೂ ಅಲ್ಲಿಗೆ ಹೋಗಿ ಬರೋಣ ಎಂದು ತೀರ್ಮಾನಿಸಿ, ಸ್ವಿಫ್ಟ್ ಕಾರಿನಲ್ಲಿ ಧರಣಿ, ಮಂಜುನಾಥ, ಕುಮಾರ್ ಉರುಫ್ ಕೆಂಗುಟ್ಟೆ ಕುಮಾರ್ ಹೊರಟರು ಎಂದರೆ ಸರಿಯಲ್ಲ. ಬಸವರಾಜು ರವರ ಬಳಿ ಇದ್ದ ಫಾರ್ಚುನರ್ ಕಾರಿನಲ್ಲಿ ಬಸವರಾಜು, ಕಿರಣ್, ಲೋಕೇಶ್ ಅಲಿಯಾಸ್ ಬುಡ್ಡ ಮತ್ತು ಚೇತನ್ ಹೊರಟರು ಎಂದರೆ ಸರಿಯಲ್ಲ. ಅದೇ ರೀತಿ, ಬಸವರಾಜು ರವರ ಬಳಿ ಇದ್ದ

ಇನೋವಾ ಕಾರಿನಲ್ಲಿ ನಾನು, ಅರುಣ್, ಪುರುಷೋತ್ತಮ್ @ ಬೋಡಿ, ಚಂದ್ರ @ ಡೋಬಿ ಚಂದ್ರ ಹೊರಟೆವು ಎಂದರೆ ಸರಿಯಲ್ಲ.

ನಂತರ ದಿನಾಂಕಃ 07-01-2019 ರಂದು ಬೆಳಗಿನ ಜಾವ ಸುಮಾರು 3-00 ಗಂಟೆ ಸುಮಾರಿಗೆ ಚನ್ನರಾಯಪಟ್ಟಣದಲ್ಲಿರುವ ಲಾಡ್ಜ್ ಬಳಿ ಹೋಗಿ receptionist ರವರಿಗೆ ಮನು ಮತ್ತು ಪಲ್ಲವಿ ಫೋಟೋ ತೋರಿಸಿ ವಿಚಾರ ಮಾಡಿದಾಗ ಅವರಿಬ್ಬರು ಲಾಡ್ಜ್ ನಲ್ಲಿದ್ದಾರೆ  ಎಂದು ಹೇಳಿ ರೂಂನ್ನು ತೋರಿಸಿದರು ಎಂದರೆ ಸರಿಯಲ್ಲ. ಆಗ ನಾವು ರೂಂ ನ ಬಾಗಿಲು ತಟ್ಟಿದ್ದಾಗ ಮನುರವರು ಬಾಗಿಲನ್ನು ತೆರೆದರು ಎಂದರೆ ಸರಿಯಲ್ಲ. ಆಗ ಒಳಗೆ ಹೋಗಿ ನೋಡಿದಾಗ ಪಲ್ಲವಿರವರು ಇದ್ದರು ಎಂದರೆ ಸರಿಯಲ್ಲ.

ನಂತರ ನಂತರ ನ್ಯಾಯಾಲಯದ ಮುಂದೆ ಹಾಜರಿರುವ 7, 9, 11 ಮತ್ತು 12 ನೇ ಆರೋಪಿತರು ಮನುರವರಿಗೆ ಹಿಗ್ಗಾ-ಮುಗ್ಗ ಹೊಡೆದು ಆತನ ಕೈಗಳನ್ನು ಟವಲ್‌ನಿಂದ ಕಟ್ಟಿ, ಲಾಡ್ಜ್‌ನಿಂದ ಈಚೆ ಕರೆದುಕೊಂಡು ಬಂದು, ಆತನ ಬಾಬ್ತು ಸ್ವಿಫ್ಟ್ ಕಾರಿನ  ಧರಣಿ, ಬಸವರಾಜು ಗಾಜುಗಳನ್ನು ನ್ಯಾಯಾಲಯದ ಮುಂದೆ ಹಾಜರಿರುವ 7 ರಿಂದ 10 ನೇ ಆರೋಪಿತರು ಹೊಡೆದು ಪುಡಿಪುಡಿ ಮಾಡಿದರು ಎಂದರೆ ಸರಿಯಲ್ಲ.

ನಂತರ ಫಾರ್ಚುನರ್ ಕಾರಿನಲ್ಲಿ ಬುಡ್ಡ, ಕೆಂಗುಟ್ಟೆ ಕುಮಾರ್ ಹಾಗೂ ಡೋಬಿ ಚಂದ್ರ ಹತ್ತಿಕೊಂಡು ಅದಕ್ಕೆ ಮನುರವರನ್ನು ಹತ್ತಿಸಿಕೊಂಡರು ಎಂದರೆ ಸರಿಯಲ್ಲ. ಇನೋವಾ ಕಾರಿನಲ್ಲಿ ಬಸವರಾಜು, ಅವರ ಮಗಳು ಪಲ್ಲವಿ, ಪುರುಷೋತ್ತಮ ಹತ್ತಿಕೊಂಡರು ಎಂದರೆ ಸರಿಯಲ್ಲ. ಧರಣಿರವರ ಸ್ವಿಫ್ಟ್ ಕಾರಿನಲ್ಲಿ ಧರಣಿ ಮತ್ತು ಮಂಜ ಹೊರಟರು ಎಂದರೆ ಸರಿಯಲ್ಲ. ಕಾರುಗಳೆಲ್ಲಾ ಭರ್ತಿಯಾಗಿದ್ದರಿಂದಲೋ ಅಥವಾ ಯಾವುದೋ ಕಾರಣಕ್ಕೆ ಬಸವರಾಜುರವರು ನನ್ನನ್ನು, ಕಿರಣ್, ಅರುಣ್ ಮತ್ತು ಚೇತನ್ ರವರನ್ನು ಸ್ವಲ್ಪ ಹೊತ್ತು ನೀವು ಇಲ್ಲಿಯೇ ಇದ್ದು, ಬಳಿಕ ಬಸ್ಸಿನಲ್ಲಿ

ಬನ್ನಿ ಎಂದು ಹೊರಟು ಹೋದರು ಎಂದರೆ ಸರಿಯಲ್ಲ. ಆ ನಂತರ ಸುಮಾರು ಅರ್ಧಗಂಟೆ ನಾವು ಅಲ್ಲಿಯೇ ಇದ್ದು ಬಳಿಕ ಬಸ್ ಹತ್ತಿ ಸೀದಾ ಬೆಂಗಳೂರಿಗೆ ಬಂದೆವು ಎಂದರೆ ಸರಿಯಲ್ಲ.

ನಂತರ ನನಗೆ ಗೊತ್ತಾದ ವಿಚಾರವೆಂದರೆಃ ನಮ್ಮನ್ನು ಬಸ್ಸಿನಲ್ಲಿ ಬರುವಂತೆ ತಿಳಿಸಿ ಹೋದ ನಂತರ ಬಸವರಾಜು ಮತ್ತು ಧರಣಿ ರವರು ಮನುರವರನ್ನು ತುಮಕೂರು ಬಳಿ ಇರುವ ಕೋಳಿಹಳ್ಳಿ ಗ್ರಾಮದ ಗೋಪಿ ಎಂಬುವವರ ಕೋಳಿಶೆಡ್ ನಲ್ಲಿ ಕೂಡಿ ಹಾಕಿ, ಎಲ್ಲಾ ಆರೋಪಿತರು ಸಂಚು ಮಾಡಿ, ದಿನಾಂಕಃ 07-01-2019 ರಂದು ರಾತ್ರಿ ಜೆಟ್ಟಿ ಅಗ್ರಹಾರದ ಬಳಿ ಕೊಲೆ ಮಾಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ

ಸದರಿ ವಿಚಾರವಾಗಿ ದಿನಾಂಕಃ 31-03-2019 ರಂದು ನನಗೆ ಈಗ ವಿವರವಾಗಿ ಓದಿ ಹೇಳಲಾದಃ *" ಕಾಮಾಕ್ಷಿಪಾಳ್ಯ ವಾಸಿ ............. ಮಾಡಿರುತ್ತಾರಂತೆ "* ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-15 ಎಂದು ಗುರುತಿಸಲಾಯಿತು. ಸದರಿ ಎಲ್ಲಾ ವಿಚಾರಗಳು ನನಗೆ ಸ್ವತಃ ಗೊತ್ತಿದ್ದರೂ ಸಹ 6 ನೇ ಆರೋಪಿ ನನ್ನ ಸ್ನೇಹಿತನ ಸಂಬಂಧಿ ಆಗಿದ್ದರಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಟಿ.ಎಸ್.ಕೆ ವಕೀಲರಿಂದಃ ಏನೂ ಇಲ್ಲ.**

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇ ಕೇ ಸರಿ ಇದೆ

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಧುಗಿರಿ